ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21** **ದಿನಾಂಕ : 1–1–2021**

# PRESS INTIMATION

**1) National Youth Festival 2021: Adventure Orientation workshop for youth**

**Presence:**

**Sri K. Srinivas, IAS, Commissioner, Youth Empowerment and Sports**

**Date : 02-01-2021 Saturday, Time : 10-00 A.M.**

**Venue : Sports Climbing Pavilion, State Youth Centre Premises, Nrupathunga Road, Near YMCA Bengaluru**

## ಪತ್ರಿಕಾ ಪ್ರಕಟಣೆ

**ಎಂ.ಹೆಚ್.ಆರ್.ಡಿ. ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ**

**ಬೆಂಗಳೂರು, ಜನವರಿ 1 (ಕರ್ನಾಟಕ ವಾರ್ತೆ):**

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ (M.H.R.D), ಉನ್ನತ ಶಿಕ್ಷಣ ಇಲಾಖೆ, ಕೇಂದ್ರ ಸರ್ಕಾರ, ನವದೆಹಲಿ ಇವರ ವತಿಯಿಂದ 2020 ದ್ವಿತೀಯ ಪಿಯುಸಿ

ಪರೀಕ್ಷೆಯಲ್ಲಿ 80th Percentile ಗಿಂತ ಹೆಚ್ಚು ಅಂಕಗಳಿಸಿದ ಹಾಗೂ **ತಮ್ಮ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಉನ್ನತ ಶಿಕ್ಷಣದಲ್ಲಿ ಮುಂದುವರಿಸಿರುವಂತಹ (ಕನಿಷ್ಠ ೦೩ ವರ್ಷದ ಪದವಿ ತರಗತಿಗೆ ದಾಖಲಾಗಿರುವ)** ವಿದ್ಯಾರ್ಥಿಗಳಿಂದ Central Sector Scheme of Scholarship for College and University Studentsಗಳಿಗೆ online ಮೂಲಕ ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಈ ಸಂಬಂಧವಾಗಿ ಕೇಂದ್ರ ಸರ್ಕಾರದ ವತಿಯಿಂದ website:**www.scholarships.gov.inನ National e-Scholarship Portal**ನಲ್ಲಿ ಹೊಸ ತಂತ್ರಾಂಶವನ್ನು ಅಳವಡಿಸಲಾಗಿರುತ್ತದೆ. ಆದಕಾರಣ, ಈ portalಲ್ಲಿಯೇ **2020ರ Fresh Batch ಮತ್ತು Renewal Batch ವಿದ್ಯಾರ್ಥಿಗಳು ಮಾತ್ರ ಅರ್ಜಿಗಳನ್ನು "online" ಮೂಲಕ ಸಲ್ಲಿಸುವಂತೆ ಈಗಾಗಲೇ ತಿಳಿಸಲಾಗಿರುತ್ತದೆ.**

ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಹೆಚ್ಚಿನ ಅವಕಾಶ ಕಲ್ಪಿಸುವ ಉದ್ದೇಶದಿಂದ ಅರ್ಹ **ವಿದ್ಯಾರ್ಥಿಗಳು ಕಾಲೇಜಿನ ಪ್ರಾಂಶುಪಾಲರುಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ದಿನಾಂಕ: 20-01-2021ರವರೆಗೆ** ವಿಸ್ತರಿಸಲಾಗಿದೆ.

ಅಂತೆಯೇ, ಪ್ರಾಚಾರ್ಯರುಗಳು, **"online" ಮೂಲಕ** ವಿದ್ಯಾರ್ಥಿಗಳು ಸಲ್ಲಿಸಿರುವ Fresh ಮತ್ತು Renewal ಅರ್ಜಿಗಳನ್ನು **"online"** ನಲ್ಲಿ ಕೂಲಂಕುಷವಾಗಿ ಪರಿಶೀಲಿಸಿ, ಸದರಿ ವಿದ್ಯಾರ್ಥಿಯು ತಮ್ಮ ಕಾಲೇಜಿನಲ್ಲಿ ದಾಖಲಾಗಿ, ವಿದ್ಯಾಭ್ಯಾಸ ಮುಂದುವರಿಸಿರುವ ಬಗ್ಗೆ ಖಚಿತ ಪಡಿಸಿಕೊಂಡು, ಸದರಿ ಮಾಹಿತಿಯನ್ನು **"online" ಮೂಲಕವೇ** ಇಲಾಖೆಗೆ ದಿನಾಂಕ:**05-02-2021**ರ ಒಳಗೆ ಸಲ್ಲಿಸುವಂತೆ **(Forward ಮಾಡುವಂತೆ)** ಕೋರಲಾಗಿದೆ.

## ನಾಟಕ ರಚನಾ ಶಿಬಿರ

**ಬೆಂಗಳೂರು, ಜನವರಿ 1 (ಕರ್ನಾಟಕ ವಾರ್ತೆ):**

**ಕರ್ನಾಟಕ ನಾಟಕ ಅಕಾಡೆಮಿಯು ನಾಟಕ ರಚನಾ ಶಿಬಿರ ಏರ್ಪಡಿಸಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ. 18 ರಿಂದ 35 ವರ್ಷಗಳ ವಯೋಮಿತಿಯುಳ್ಳ ಯುವಕ /ಯುವತಿಯರು, ನಾಟಕ ರಚನೆಯಲ್ಲಿ ಆಸಕ್ತಿಯುಳ್ಳವವರು ತಮ್ಮ ಸ್ವವಿವರಗಳೊಂದಿಗೆ (ವಯಸ್ಸಿನ ದೃಢೀಕರಣ**

ಲಗತ್ತಿಸಬೇಕು) ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ, ಚಾಲುಕ್ಯ ವಿಭಾಗ, ಕನ್ನಡಭವನ, ಜೆ.ಸಿ.ರಸ್ತೆ, ಬೆಂಗಳೂರು-560002. ಇವರಿಗೆ ದಿನಾಂಕ 18-01-2021 ರೊಳಗಾಗಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳನ್ನು ದೂರವಾಣಿ : 080 - 22237484, ಅಕಾಡೆಮಿಯಿಂದ ಪಡೆಯಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಮೃಗಾಲಯದ ಪ್ರಾಣಿಗಳ ದತ್ತು ಸ್ವೀಕಾರ

ಬೆಂಗಳೂರು, ಜನವರಿ 1 (ಕರ್ನಾಟಕ ವಾರ್ತೆ):

ವೆಂಕಟೇಶ್ ಮಡ್ಡಿಬಂಡೆ ಶೇಷದ್ರಿವಾಸನ್, ಬೆಂಗಳೂರು ಅವರು ಮೈಸೂರು ಮೃಗಾಲಯದ ನೀರು ಕುದುರೆ ಪ್ರಾಣಿಯನ್ನು ದತ್ತು ಸ್ವೀಕಾರ ಮಾಡಿರುತ್ತಾರೆ

ಶ್ರೀಕಾಂತ್ ಬಾಲಿಕ ಪ್ರೌಢಶಾಲೆ, ಮೈಸೂರು ಇವರು ಕಾಮನ್ ಫೀಪಲ್‌ನ್ನು, ಆದಿತ್ಯ ಪ್ರಕಾಶ್, ಬೆಂಗಳೂರು ಇವರು ಮೀರ್ಕಟ್, ನಟಶಾ ಬಿ. ಎಸ್. ಇವರು ಕಾಮನ್ ಬ್ರಾನ್ ಔಲ್, ಅಥವ್ ಎಸ್.ಎ. ಬೆಂಗಳೂರು ಇವರು ಸ್ಮೂತ್ ಕೋಟೆಡ್ ಅಟ್ಟರ್, ಲಯನ್ ಟೈಲ್ಡ್ ಮೆಕಾಕ್, ರಿಂಗ್ ಟೈಲ್ಡ್ ಲೆಮೂರ್ ಮತ್ತು ಏಷ್ಯನ್ ಗ್ರೇ ಹಾರ್ನ್ಬಿಲ್, ಶೇಷಾದ್ರಿಪುರಂ ಇಂಡಿಪೆಂಡೆಂಟ್ ಪಿ.ಯು ಕಾಲೇಜ್ ಮೈಸೂರು ಇವರು ಬ್ಲಾಕ್ ಬಕ್ ಮತ್ತು ಮೌಸ್ಟಾಚೆಡ್ ಪ್ಯಾರಾಕೀಟ್ ನ್ನು ದತ್ತು ಸ್ವೀಕಾರ ಮಾಡಿರುತ್ತಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಬಿ.ಫಾರ್ಮ್ ಹಾಗೂ ಪ್ರಥಮ ವರ್ಷದ ಡಿ.ಫಾರ್ಮ್ ಕೋರ್ಸ್ ಪ್ರವೇಶ

ಬೆಂಗಳೂರು, ಜನವರಿ 1 (ಕರ್ನಾಟಕ ವಾರ್ತೆ):

2020-21ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಬಿ.ಫಾರ್ಮ್ ಹಾಗೂ ಪ್ರಥಮ ವರ್ಷದ ಡಿ.ಫಾರ್ಮ್ ಕೋರ್ಸ್‌ಗಳಲ್ಲಿ ಉಳಿದ ಬಾಕಿ ಸೀಟುಗಳಿಗೆ ಪ್ರವೇಶ ಪಡೆಯಲು ಇಚ್ಚಿಸುವ ಅರ್ಹ ಅಭ್ಯರ್ಥಿಗಳು 4ನೇ ಜನವರಿ 2021ರಂದು ಬೆಳಿಗ್ಗೆ 9.00 ರಿಂದ 11.00 ಗಂಟೆಯೊಳಗೆ ನೋಂದಣಿ ಸಮಿತಿಯ ಮುಂದೆ ಪ್ರವೇಶಕ್ಕೆ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಸಂದರ್ಶನಕ್ಕೆ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ನಂ.2. ಪಿ.ಕಾಳಿಂಗರಾವ್ ರಸ್ತೆ, ಸುಬ್ಬಯ್ಯ ವೃತ್ತ ಬೆಂಗಳೂರು-27 ಇಲ್ಲಿ ಹಾಜರಾಗಲು ಸೂಚಿಸಿದೆ.

ಪ್ರಥಮ ಬಿ.ಫಾರ್ಮ ಕೋರ್ಸಿನಲ್ಲಿ ಉಳಿಕೆಯಾಗಿರುವ ಸೀಟುಗಳ ಹಂಚಿಕೆಯನ್ನು ಸಿ.ಇ.ಟಿ. **(K.E.A)** ರ್‍ಯಾಂಕಿನ ಆಧಾರದ ಮೇಲೆ ಮಾಡಲಾಗುವುದು. ಸಿ.ಇ.ಟಿ ರ್‍ಯಾಂಕ್ ಪ್ರಮಾಣ ಪತ್ರವು ಕಡ್ಡಾಯವಾಗಿರುತ್ತದೆ. ಪ್ರಥಮ ಡಿ.ಫಾರ್ಮ ಕೋರ್ಸಿನಲ್ಲಿ ಉಳಿಕೆಯಾಗಿರುವ ಸೀಟುಗಳಿಗೆ ಪರೀಕ್ಷಾ ಪ್ರಾಧಿಕಾರ ಮಂಡಳಿಯಿಂದ ಪ್ರಕಟವಾಗಿರುವ ರ್‍ಯಾಂಕ್‌ಗಳ ಆಧಾರದ ಮೇಲೆ ಸೀಟು ಹಂಚಿಕೆ ಮಾಡಲಾಗುವುದು ಹಾಗೂ ಆಯ್ಕೆಯಾದ ವಿದ್ಯಾರ್ಥಿಗಳು ಅದೇ ದಿನಾಂಕದಂದು ನಿಗದಿತ ಶುಲ್ಕವನ್ನು ಪಾವತಿಸಿ ಪ್ರವೇಶವನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ **080–22222681,** ಇ–ಮೇಲ್ **principal.gcp123@gmail.com** **Website:** **www.govtcopblr.org** ಸಂಪರ್ಕಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

## Admission to B Pharm and D.Pharm courses

Bengaluru, January 1(Karnataka Information):

Eligible candidates are informed that counseling for the admission to B Pharm and D. Pharm courses for the unfilled seats in govt. College of Pharmacy No.2 P. Kalingarao Road, Subbaiah Circle, Bangalore-27 for the year 2020-21 will be held on 04-01-2021. The remaining seats in B. Pharm will be allotted only on the basis of CET ranking. CET rank certificate is mandatory. Remaining seats in D. Pharm will on the basis of ranking issued by Board of Examining Authority. The students have to appear before the registration committee on 04-01-2021 between 9.00 a.m to 11.00 a.m with all original documents at the above mentioned address. The selected candidates should take admission on the same day by paying the fees. Further details contact number 080-22222681, Email: principal.gcp123@gmail.com Website: www.govtcopblr.org

## ಸಾರ್ವಜನಿಕ ಗ್ರಂಥಾಲಯ ಇಲಾಖೆ
## 2020ನೇ ವರ್ಷದಲ್ಲಿ ಪ್ರಥಮ ಮುದ್ರಣಗೊಂಡ ಪುಸ್ತಕ ಆಯ್ಕೆಗಾಗಿ ಆಹ್ವಾನ

**ಬೆಂಗಳೂರು, ಜನವರಿ 1 (ಕರ್ನಾಟಕ ವಾರ್ತೆ):**

ಸಾರ್ವಜನಿಕ ಗ್ರಂಥಾಲಯ ಇಲಾಖೆ 2020ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾದ ಪುಸ್ತಕಗಳ ಆಯ್ಕೆಗಾಗಿ ಆಹ್ವಾನಿಸಿದೆ.

ದಿನಾಂಕ: 30-01-2021ರೊಳಗೆ ಗ್ರಂಥಸ್ವಾಮ್ಯ ವಿಭಾಗ, ರಾಜ್ಯ ಕೇಂದ್ರ ಗ್ರಂಥಾಲಯ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಕಾಪಿರೈಟ್ ಮಾಡಿಸಿರತಕ್ಕದ್ದು, ಕಾಫಿರೈಟ್ ಮಾಡಿಸಿರುವ ಪುಸ್ತಕಗಳನ್ನು ಆಯ್ಕೆಗಾಗಿ ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು ಹಾಗೂ ಡಿಜಿಟಲ್ ಗ್ರಂಥಾಲಯ ಸೇವೆಯನ್ನು ಸಾರ್ವಜನಿಕ ಓದುಗರಿಗೆ ಒದಗಿಸಲು ಅನುಕೂಲವಾಗುವಂತೆ ಆಸಕ್ತಿಯುಳ್ಳ ಲೇಖಕರು, ಲೇಖಕ-ಪ್ರಕಾಶಕರು ಮತ್ತು ಪ್ರಕಟಣಾ ಸಂಸ್ಥೆಗಳು ಪುಸ್ತಕವನ್ನು ಆಯ್ಕೆಗೆ ಸಲ್ಲಿಸುವಾಗ ತಮ್ಮ ಅನುಮತಿ ಪತ್ರದೊಂದಿಗೆ ಸದರಿ ಪುಸ್ತಕದ ಸಾಫ್ಟ್‌ಕಾಪಿಯನ್ನು ಸಿ. ಡಿ ರೂಪದಲ್ಲಿ (ನೋಂದಣಿ ಪತ್ರದ ಪ್ರತಿಯೊಂದಿಗೆ) ನಿರ್ದೇಶಕರು, ಸಾರ್ವಜನಿಕಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯಗೋಪುರ, 4ನೇ ಮಹಡಿ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇಲ್ಲಿಗೆ **ದಿನಾಂಕ: 02-02-2021ರಂದು ಸಂಜೆ 5.30 ಗಂಟೆಯೊಳಗೆ** ಸಲ್ಲಿಸುವುದು.

ತದನಂತರ ಬಂದ ಯಾವುದೇ ಪುಸ್ತಕಗಳನ್ನು ಸ್ವೀಕರಿಸಲಾಗುವುದಿಲ್ಲ. ನಿಗದಿತಅರ್ಜಿ ನಮೂನೆ ಮತ್ತು ನಿಬಂಧನೆಗಳ ಮಾಹಿತಿಗಾಗಿ ಇಲಾಖಾ ಅಂತರ್ಜಾಲ www.dpl.karnataka.gov.inಹಾಗೂ ರಾಜ್ಯದಎಲ್ಲಾಜಿಲ್ಲಾ/ನಗರಕೇಂದ್ರ ಗ್ರಂಥಾಲಯಗಳ ಉಪನಿರ್ದೇಶಕರು/ಮುಖ್ಯಗ್ರಂಥಾಲಯಾಧಿಕಾರಿಗಳ ಕಛೇರಿಗಳಲ್ಲಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿಈ ಕಛೇರಿಯದೂರವಾಣಿ 080-22864990, 22867358 ಸಂಪರ್ಕಿಸಲುಕೋರಿದೆ.

## ಉಚಿತ ಸಾಹಸ ತರಬೇತಿ ಕಾರ್ಯಕ್ರಮ

**ಬೆಂಗಳೂರು, ಜನವರಿ 1 (ಕರ್ನಾಟಕ ವಾರ್ತೆ):**

ಭಾರತ ಸರ್ಕಾರದ  ನೆಹರು ಯುವ ಕೇಂದ್ರ ಸಂಘಟನೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜನರು ತಮ್ಮಯ ನ್ಯಾಷನಲ್ ಆಕಾಡೆಮಿ ಆಫ್ ಅಡ್ವೆಂಚರ್ ಇವರುಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ 02-01-2021ರಂದು ನಗರದ ನೃಪತುಂಗ ರಸ್ತೆಯಲ್ಲಿರುವ ರಾಜ್ಯ ಯುವ ಕೇಂದ್ರದ ಆವರಣದಲ್ಲಿ ಒಂದು ದಿನದ ಉಚಿತ ಸಾಹಸ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದ ಅಡಿಯಲ್ಲಿ ಯುವಜನರಿಗೆ ಕೃತಕ ಗೋಡೆ ಸುತ್ತುವಿಕೆ ಮತ್ತಿತರ ಸಹಾಸ ಚಟುವಟಿಕೆ ಹಮ್ಮಿಕೊಳ್ಳುವುದರ ಜೊತೆಯಲ್ಲಿ ಸಾಹಸ ಚಲನ ಚಿತ್ರ ಪ್ರದರ್ಶಿಸಲಾಗುತ್ತದೆ. ಅಲ್ಲದೆ ಸಾಹಸ ಕ್ರೀಡೆಗೆ ಸಂಬಂಧಿಸಿದ ವಸ್ತು ಪ್ರದರ್ಶನ ಹಾಗೂ ಸಲಕರಣೆಗಳ ಪ್ರದರ್ಶನ ಏರ್ಪಡಿಸಲಾಗುತ್ತದೆ. ಈ ಕಾರ್ಯಕ್ರಮವನ್ನು ಜೆತನಾ ಸಂಸ್ಥೆ ಮತ್ತು ಮೌಂಟನೆರಿಂಗ್ ಫೌಂಡೇಷನ್‌ನ ನುರಿತ ತರಬೇತಿದಾರರಿಂದ ತರಬೇತಿಯನ್ನು ನೀಡಲಾಗುತ್ತದೆ.

ಸದರಿ ಕಾರ್ಯಕ್ರಮ ಭಾರತ ಸರಕಾರದ ಯುವ ಕಾರ್ಯ  ಮತ್ತು ಕ್ರೀಡಾ ಸಚಿವಾಲಯ ವತಿಯಿಂದ ಹಮ್ಮಿಕೊಳ್ಳಲಾಗಿರುವ "ರಾಷ್ಟ್ರೀಯ ಯುವಜನೋತ್ಸವ"ದ ಅಂಗವಾಗಿ ಹಮ್ಮಿಕೊಳ್ಳಲಾಗುತ್ತಿದೆ. ಆಸಕ್ತ ಇರುವ ಯುವಜನರು ದಿನಾಂಕ 02-01-2021ರ ಬೆಳಿಗ್ಗೆ ಈ ಮೇಲೆ ತಿಳಿಸಿದ ಸ್ಥಳದಲ್ಲಿ ವರದಿ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ 9902781815 ಮತ್ತು 9008840491 ಕ್ಕೆ ಸಂಪರ್ಕಿಸಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಜನವರಿ 17 ರಂದು ಪಲ್ಸ್ ಪೋಲಿಯೋ

**ಬೆಂಗಳೂರು, ಜನವರಿ 1 (ಕರ್ನಾಟಕ ವಾರ್ತೆ):**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು  17ನೇ ಜನವರಿ 2021ರಂದು ರಾಷ್ಟ್ರೀಯ ಲಸಿಕಾ ದಿನ (ಪಲ್ಸ್ ಪೋಲಿಯೋ) ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

17ನೇ ಜನವರಿ 2021 ರಲ್ಲಿ ಒಂದು ಸುತ್ತಿನ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಕೋವಿಡ್ 19 ನಿವಾರಣಾ  ಮುನ್ನೆಚ್ಚರಿಕೆ ಕ್ರಮಗಳೊಂದಿಗೆ boPV ನೀಡುವುದರ ಮೂಲಕ ನಡೆಸಲಾಗುವುದು. ಕಾರ್ಯಕ್ರಮದ ಮೊದಲನೇ ದಿನ ಪೋಲಿಯೊ ಬೂತ್‌ಗಳಲ್ಲಿ ಹಾಗೂ ನಂತರದ 2-3 ದಿನಗಳಲ್ಲಿ ಮನೆ-ಮನೆ ಭೇಟಿಯ ಮೂಲಕ 0-5 ವರ್ಷದೊಳಗಿನ ಎಲ್ಲಾ

ಮಕ್ಕಳಿಗೆ ಪೋಲಿಯೋ ಹನಿ ನೀಡುವಂತೆ ವ್ಯವಸ್ಥೆ ಮಾಡಲಾಗುತ್ತದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಯುವಜನೋತ್ಸವ

**ಬೆಂಗಳೂರು, ಜನವರಿ 1 (ಕರ್ನಾಟಕ ವಾರ್ತೆ):**

ಭಾರತ ಸರ್ಕಾರವು ರಾಷ್ಟ್ರೀಯ ಯುವಜನೋತ್ಸವ ಕಾರ್ಯಕ್ರಮವನ್ನು 2021ರ ಜನವರಿ 12 ರಿಂದ 16 ರವರೆಗೆ Virtual/hybrid ಮಾಧ್ಯಮದಲ್ಲಿ ಆಯೋಜಿಸಿದೆ.

24ನೇ ರಾಷ್ಟ್ರೀಯ ಯುವಜನೋತ್ಸವ ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ಹಮ್ಮಿಕೊಳ್ಳಲಾಗುತ್ತಿದ್ದು ಕರ್ನಾಟಕ ರಾಜ್ಯದ ಯುವ ತಂಡಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕರೆ ನೀಡಿದೆ.

ರಾಜ್ಯದಿಂದ ರಾಷ್ಟ್ರ ಮಟ್ಟದ ಯುವಜನೋತ್ಸವದಲ್ಲಿ ಪಾಲ್ಗೊಳ್ಳಲು ಅನುವಾಗುವಂತೆ ರಾಜ್ಯದಲ್ಲಿ ಜಿಲ್ಲಾ ಮತ್ತು ರಾಜ್ಯ ಯುವಜನೋತ್ಸವ ಕಾರ್ಯಕ್ರಮಗಳನ್ನು ಈಗಾಗಲೇ ಆಯೋಜಿಸಲಾಗಿದೆ.

ಕೋವಿಡ್–19 ಮಾರ್ಗಸೂಚಿಗಳಂತೆ ಎರಡು ಹಂತಗಳಲ್ಲಿ ಯುವಜನೋತ್ಸವವನ್ನು Online and Offline ಮೂಲಕ ಭಾರತ ಸರ್ಕಾರವು ರಾಷ್ಟ್ರೀಯ ಯುವಜನೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಿದೆ.

ಯುವಜನೋತ್ಸವದಲ್ಲಿ ಸ್ಪರ್ಧಾತ್ಮಕ ವಿಭಾಗ, ವೈಯಕ್ತಿಕ ವಿಭಾಗ, ಏಕಾಂಕ ನಾಟಕ (ಇಂಗ್ಲೀಷ್ ಅಥವಾ ಹಿಂದಿ ಭಾಷೆಯಲ್ಲಿ ಮಾತ್ರ), ಶಾಸ್ತ್ರೀಯ ಗಾಯನ–1. ಹಿಂದೂಸ್ತಾನಿ ಮತ್ತು 2. ಕರ್ನಾಟಿಕ್, ಶಾಸ್ತ್ರೀಯ ವಾದ್ಯ– 1.ಸಿತಾರ್, 2.ಕೊಳಲು, 3.ತಬಲಾ, 4.ವೀಣೆ, 5.ಮೃದಂಗಂ. ಹಾರ್ಮೋನಿಯಂ (ಲಘು). ಗೀಟಾರ್. ಶಾಸ್ತ್ರೀಯ ನೃತ್ಯ–1.ಮಣಿಪುರ, 2.ಓಡಿಸ್ಸಿ, 3.ಭರತನಾಟ್ಯಂ, 4. ಕಥಕ್, 5. ಕುಚಿಪುಡಿ. ಆಶುಭಾಷಣ. ಸಾಂಘಿಕ ವಿಭಾಗ ಜಾನಪದ ನೃತ್ಯ, ಜಾನಪದ ಗೀತೆ. ಸ್ಪರ್ಧೇತರ ವಿಭಾಗ(ರಾಷ್ಟ್ರೀಯ ಯುಜನೋತ್ಸವದಲ್ಲಿ) ಸಾಹಸೋತ್ಸವ ಸುವಿಚಾರ–ಯುವಜನರು ಮತ್ತು ಗಣ್ಯ ವ್ಯಕ್ತಿಗಳ ಸಂವಾದ– ರಾಷ್ಟ್ರೀಯ ಸೇವಾ ಯೋಜನೆ ಸೇರಿದಂತೆ ಅನೇಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**Karnataka State Pollution Control Board**
**Parisara Bhavan, Bengaluru**
**AQI of the CAAQM stations established in Bengaluru City**
**Date : 1.1.2021**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 96 | Satisfactory | $PM_{.10}$ |
| 2 | Jayanagar 5th Block, Shalini ground | 87 | Satisfactory | $PM_{2.5}$ |
| 3 | KAVIKA, Mysore Road | 91 | Satisfactory | $PM_{.10}$ |
| 4 | Rajeev Gandhi Institute of Chest Disease, NIMHANS, Hombegowda Nagar | 63 | Satisfactory | $O_3$ |
| 5 | HSR Layout, near Central Silkboard | 74 | Satisfactory | $PM_{2.5}$ |
| 6 | City Railway Station, Magestic, Bengaluru | 103 | Moderate | $PM_{10}$ |
| 7 | Saneguruvanahalli, Nisarga Bhavan, KSPCB, Shivanagara | 81 | Satisfactory | $PM_{10}$ |

| | | | | |
|---|---|---|---|---|
| 8 | BWSSB, Kadabesanahalli | 144 | Moderate | CO |
| 9 | Peenya | 73 | Satisfacto ry | $O_3$ |
| 10 | BTM Layout | * | * | * |
| | | | | |

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201– | Breathing discomfort to people on prolonged |
| Satisfactory (51–100) | Minor breathing discomfort to sensitive | Very Poor | Respiratory illness to the people on prolonged |
| Moderate (101–200) | Breathing discomfort to the people with lung, | Severe (>401) | Respiratory effects even on healthy people |

**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

**ಪರಿಸರ ಭವನ, ಬೆಂಗಳೂರು.**

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಷ್ಠಕ ವಾಯು ಗುಣಮಟ್ಟ ಮಾಪನ ಕೇಂದ್ರಗಳ ವಾಯು ಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 1.1.2021**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯು ಗುಣಮಟ್ಟ ಸೂಚ್ಯಂಕ | ವರ್ಗ | ಪ್ರಮುಖ ಮಾಲಿನ್ಯ |
|---|---|---|---|---|

| | | (AQI) | | ಕಾರಕ |
|---|---|---|---|---|
| 1 | ಪಶುವೈದ್ಯಕೀಯ ಕಾಲೇಜು, ಹೆಬ್ಬಾಳ | 96 | ತೃಪ್ತಿಕರ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ | 87 | ತೃಪ್ತಿಕರ | $PM_{2.5}$ |
| 3 | ಕವಿಕ, ಮೈಸೂರು ರಸ್ತೆ | 91 | ತೃಪ್ತಿಕರ | $PM_{10}$ |
| 4 | ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆ, ನಿಮ್ಹಾನ್ ಹೊಂಬೆಗೌಡನಗರ | 63 | ತೃಪ್ತಿಕರ | $O_3$ |
| 5 | ಹೆಚ್.ಎಸ್.ಆರ್ ಲೇಔಟ್, | 74 | ತೃಪ್ತಿಕರ | $PM_{2.5}$ |
| 6 | ನಗರ ರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 103 | ಸಾಧಾರಣ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ | 81 | ತೃಪ್ತಿಕರ | $PM_{10}$ |
| 8 | BWSSB, ಕಾಡಬೀಸನಹಳ್ಳಿ | 144 | ಸಾಧಾರಣ | CO |
| 9 | ಪೀಣ್ಯ | 73 | ತೃಪ್ತಿಕರ | $O_3$ |
| 10 | ಬಿಟಿಎಂ ಲೇಔಟ್ | * | * | * |

| ವರ್ಗ(ಶ್ರೇಣಿ) | ಉಂಟಾಗಬಹುದಾದ ಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯ ಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕ ಒಡ್ಡುವಿಕೆಯಿಂದ ಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕ ಒಡ್ಡುವಿಕೆಯಿಂದ ಜನರಿಗೆ ಶ್ವಾಸಕೋಶದ ಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತ ಜನರಿಗೂ ಉಸಿರಾಟದ ಅಸ್ವಸ್ಥತೆ |